# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 306
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿ
ಉತ್ತರಿಸಬೇಕಾದ ದಿನಾಂಕ : 12.07.2018

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೀದರ್ ಜಿಲ್ಲೆಯಲ್ಲಿರುವ ಒಟ್ಟು ನೇಕಾರರ ಕುಟುಂಬಗಳು ಎಷ್ಟು ಹಾಗೂ ನೇಕಾರರ ಜನಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)</td><td>ಬೀದರ್ ಜಿಲ್ಲೆಯಲ್ಲಿರುವ ಒಟ್ಟು ನೇಕಾರರ ಕುಟುಂಬಗಳ ವಿವರಗಳು ಈ ಕೆಳಕಂಡಂತಿದೆ.
<table>
<tr><th>ಕ್ರ ಸಂ</th><th>ತಾಲ್ಲೂಕು</th><th>ಕೈಮಗ್ಗ ನೇಕಾರರ ಕುಟುಂಬಗಳು</th><th>ಕೈಮಗ್ಗ ನೇಕಾರರ ಜನ ಸಂಖ್ಯೆ</th><th>ವಿದ್ಯುತ್ ಮಗ್ಗ ನೇಕಾರರ ಕುಟುಂಬಗಳು</th><th>ವಿದ್ಯುತ್ ಮಗ್ಗ ನೇಕಾರರ ಜನ ಸಂಖ್ಯೆ</th></tr>
<tr><td>1</td><td>ಬೀದರ್</td><td>154</td><td>462</td><td>14</td><td>14</td></tr>
<tr><td>2</td><td>ಹುಮನಾಬಾದ್</td><td>208</td><td>416</td><td>9</td><td>9</td></tr>
<tr><td>3</td><td>ಬಸವಕಲ್ಯಾಣ</td><td>294</td><td>882</td><td>8</td><td>8</td></tr>
<tr><td>4</td><td>ಬಾಲ್ಕಿ</td><td>180</td><td>540</td><td>36</td><td>45</td></tr>
<tr><td>5</td><td>ಔರಾದ್</td><td>38</td><td>114</td><td>55</td><td>75</td></tr>
<tr><td></td><td>ಒಟ್ಟು</td><td>874</td><td>2414</td><td>122</td><td>151</td></tr>
</table></td></tr>
<tr><td>ಆ</td><td>2015-2016 ಮತ್ತು 2016-2017ನೇ ಸಾಲಿನಲ್ಲಿ ನೇಕಾರರ ಕುಟುಂಬಕ್ಕೆ ಇಲ್ಲಿಯವರೆಗೆ ಸೌಲಭ್ಯಕ್ಕಾಗಿ ಖರ್ಚು ಮಾಡಿದ ಅನುದಾನವೆಷ್ಟು;</td><td>2015-16 ಮತ್ತು 2016-17ನೇ ಸಾಲಿನಲ್ಲಿ ನೇಕಾರರ ಕುಟುಂಬಗಳಿಗೆ ಸೌಲಭ್ಯಗಳನ್ನು ಒದಗಿಸಲು ಬಿಡುಗಡೆ ಮಾಡಲಾದ ಅನುದಾನದ ವಿವರಗಳು ಈ ಕೆಳಕಂಡಂತಿದೆ.<br>(ರೂ. ಲಕ್ಷಗಳಲ್ಲಿ)
<table>
<tr><th rowspan="2">ಕ್ರ. ಸಂ</th><th rowspan="2">ಯೋಜನೆ</th><th colspan="2">2015-16</th><th colspan="2">2016-17</th></tr>
<tr><th>ಭೌತಿಕ</th><th>ಆರ್ಥಿಕ</th><th>ಭೌತಿಕ</th><th>ಆರ್ಥಿಕ</th></tr>
<tr><td>1</td><td>ವಿಶೇಷ ಘಟಕ ಯೋಜನೆ</td><td>60</td><td>318.51</td><td>60</td><td>65.79</td></tr>
<tr><td>2</td><td>ಗಿರಿಜನ ಉಪಯೋಜನೆ</td><td>36</td><td>8.91</td><td>76</td><td>42.705</td></tr>
<tr><td>3</td><td>ಉಣ್ಣೆ ವಲಯ ಯೋಜನೆ</td><td>4</td><td>17.00</td><td>-</td><td>-</td></tr>
<tr><td>4</td><td>ವಸತಿ ಕಾರ್ಯಾಗಾರ ಯೋಜನೆ</td><td>-</td><td>-</td><td>14</td><td>32.20</td></tr>
<tr><td>5</td><td>ಜಿಲ್ಲಾ ವಲಯ ಯೋಜನೆ</td><td>32</td><td>15.00</td><td>32</td><td>15.00</td></tr>
<tr><td>6</td><td>ನೂತನ ಜವಳಿ ನೀತಿ ಯೋಜನೆ</td><td>40</td><td>3.00</td><td>300</td><td>22.50</td></tr>
<tr><td></td><td>ಒಟ್ಟು</td><td>172</td><td>362.42</td><td>482</td><td>178.195</td></tr>
</table></td></tr>
<tr><td>ಇ</td><td>ಜಿಲ್ಲೆಯ ನೇಕಾರರ ಕುಟುಂಬಗಳು ಸಂಕಷ್ಟದಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;</td><td>ಇಲ್ಲ.<br>ಆದರೆ ಬೀದರ್ ಜಿಲ್ಲೆಯಲ್ಲಿನ ನೇಕಾರರ ಕುಟುಂಬಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ.<br>ಮಿನಿ ಪವರ್ ಲೂಮ್ ಪಾರ್ಕ್ ಸ್ಥಾಪನೆ, ವಸತಿ ಮತ್ತು ಕಾರ್ಯಾಗಾರ ನಿರ್ಮಾಣ, ಕೈಮಗ್ಗ & ವಿದ್ಯುತ್ ಮಗ್ಗ ಸಲಕರಣೆ ಖರೀದಿ, ದುಡಿಮೆ ಬಂಡವಾಳ ಸಹಾಯಧನ, ಸಹಕಾರ ಸಂಘಗಳಿಗೆ ಸಾಮಾನ್ಯ ಸೌಲಭ್ಯ ಕೇಂದ್ರ, ಸುಧಾರಿತ ಕಾರ್ಡಿಂಗ್ ಯಂತ್ರ, ಉಣ್ಣೆ ಕತ್ತರಿಸುವ ಯಂತ್ರ, ಪಿಠೋಪಕರಣ, ಉಣ್ಣೆ ಸಂಗ್ರಹಣ ಉಗ್ರಾಣ, ಸಂಚಾರಿ ಮಾರುಕಟ್ಟೆ ವಾಹನ, ಕೈಮಗ್ಗ / ವಿದ್ಯುತ್ ಮಗ್ಗ ನೇಯ್ಗೆ ತರಬೇತಿ ಮುಂತಾದ ಯೋಜನೆಗಳ ಅನುಷ್ಠಾನಕ್ಕಾಗಿ ಅನುದಾನ ನೀಡಲಾಗುತ್ತಿದೆ.</td></tr>
<tr><td>ಈ</td><td>ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನ ಸುಂಧಾಳ ಗ್ರಾಮದಲ್ಲಿ ಸೇರಿದಂತೆ ಜಿಲ್ಲೆಯ ನಾನಾ ಗ್ರಾಮದಲ್ಲಿ ನೇಕಾರರು ಸಿದ್ಧಪಡಿಸಿದ ಬಟ್ಟೆಗಳು ಮಾರಾಟವಾಗುತ್ತಿಲ್ಲವೆಂದು</td><td>ಇಲ್ಲ.<br>ನೇಕಾರರು ಸಂಘಟಿತ ವಲಯದಲ್ಲಿ ಇದ್ದು, ಕೈಮಗ್ಗ ನೇಕಾರರ ಸಹಕಾರ ಸಂಘಗಳ ಮೂಲಕ ಕಚ್ಚಾಮಾಲು ಪಡೆದು, ಪಕ್ಕಾ ಮಾಲನ್ನು ಸಂಘಕ್ಕೆ ನೀಡಿ ಮಜೂರಿ ಪಡೆಯುತ್ತಾರೆ. ಮಾರಾಟದ ವ್ಯವಸ್ಥೆಯನ್ನು ಸಹಕಾರ ಸಂಘಗಳು ನಿರ್ವಹಿಸುತ್ತಿವೆ.<br>ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಉಪ ಕೇಂದ್ರಗಳ ನೇಕಾರರು ಸಹ ಕಚ್ಚಾಮಾಲು ಪಡೆದು, ಪಕ್ಕಾ ಮಾಲನ್ನು ನಿಗಮಕ್ಕೆ ನೀಡುವರು. ಸಿದ್ಧ ವಸ್ತುಗಳ ಮಾರಾಟವನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಮೂಲಕ ನಿರ್ವಹಿಸುತ್ತಿದೆ.</td></tr>
</table>

| | | |
|---|---|---|
| | ನೂರಾರರು ಕುಟುಂಬಗಳು ನೇಕಾರರ ವೃತ್ತಿಯಿಂದ ದೂರ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು? | ನೇಕಾರಿಕೆ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗಲು ಸಹಕಾರಿಯಾಗುವಂತೆ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಈ ಕೆಳಕಂಡ ಯೋಜನೆಗಳನ್ನು ನೇಕಾರರಿಗಾಗಿ ಅನುಷ್ಠಾನಗೊಳಿಸಲಾಗುತ್ತಿದೆ. |

| ಕ್ರ ಸ | ಯೋಜನೆಗಳ ವಿವರ | ಕ್ರ. ಸ. | ಯೋಜನೆಗಳ ವಿವರ |
|---|---|---|---|
| | **ಕೈಮಗ್ಗ ನೇಕಾರರಿಗೆ** | | |
| 1 | ಮಹಾತ್ಮಾ ಗಾಂಧಿ ಬುನಕರ ಬೀಮಾ ಯೋಜನೆ | 9 | ನೇಕಾರರ ವಿಶೇಷ ಪ್ಯಾಕೇಜ್ (KHDC) |
| 2 | ನೇಕಾರ ಕಲ್ಯಾಣ ಯೋಜನೆ | 10 | ಕಚ್ಚಾ ಮಾಲು ಖರೀದಿಗಾಗಿ ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯಧನ |
| 3 | ಶಿಕ್ಷಾ ಸಹಯೋಗ ಯೋಜನೆ | 11 | ಸಾಲ ಮನ್ನಾ ಮತ್ತು ಬಡ್ಡಿ ಮನ್ನಾ |
| 4 | ಮಿತವ್ಯಯ ನಿಧಿ ಯೋಜನೆ | 12 | ವಸತಿ ಕಾರ್ಯಾಗಾರ ಯೋಜನೆ |
| 5 | ನೇಕಾರರ ಅಧ್ಯಯನ ಪ್ರವಾಸ | 13 | ಉಣ್ಣೆ ವಲಯ ಯೋಜನೆ |
| 6 | ಶೇ.20ರಷ್ಟು ರಿಬೇಟ್ ಯೋಜನೆ | 14 | ಕೈಮಗ್ಗ ವಿಕಾಸ ಯೋಜನೆ |
| 7 | ಸಾಮಾನ್ಯ ಸೌಲಭ್ಯ ಕೇಂದ್ರ ಸ್ಥಾಪನೆ | 15 | ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆ |
| 8 | ಶೇ.1 ಮತ್ತು 3ರ ಬಡ್ಡಿ ದರದಲ್ಲಿ ಸಾಲ | | |

| ಕ್ರ. ಸಂ. | ಯೋಜನೆಗಳ ವಿವರ | ಕ್ರ. ಸಂ. | ಯೋಜನೆಗಳ ವಿವರ |
|---|---|---|---|
| | **ವಿದ್ಯುತ್ ಮಗ್ಗ ನೇಕಾರರಿಗೆ** | | |
| 1 | ಗುಂಪು ವಿಮಾ ಯೋಜನೆ | 8 | ಶಿಕ್ಷಾ ಸಹಯೋಗ ಯೋಜನೆ |
| 2 | ನಾಟಿಂಗ್ ಮಿಷಿನ್ ಅಳವಡಿಕೆಗೆ ಸಹಾಯಧನ | 9 | ನೂತನ ಜವಳಿ ನೀತಿಯಡಿ ತರಬೇತಿ |
| 3 | ರಿಯಾಯಿತಿ ದರದಲ್ಲಿ ವಿದ್ಯುತ್ ಪೂರೈಕೆ | 10 | ಎಲೆಕ್ಟ್ರಾನಿಕ್ ಜಕಾರ್ಡ್ ಅಳವಡಿಕೆಗೆ ಸಹಾಯಧನ |
| 4 | 02 ವಿದ್ಯುತ್ ಮಗ್ಗ ಪೂರೈಸುವ ಯೋಜನೆ | 11 | ವಿದ್ಯುತ್‌ಮಗ್ಗಳಿಗೆ ಶೇರು ಬಂಡವಾಳ ಸಹಾಯ |
| 5 | ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ | 12 | ಗ್ರಾಮೀಣ ಪ್ರದೇಶದ ವಿದ್ಯುತ್ ಮಗ್ಗಗಳಿಗೆ ಸೌರಶಕ್ತಿ ಉಪಕರಣ ಗಳಿಗೆ ಶೇ.50 ರಷ್ಟು ಸಹಾಯಧನ. |
| 6 | ನೇಕಾರರ ಕಾಲೋನಿಗಳಿಗೆ ಮೂಲಭೂತ ಸೌಲಭ್ಯ ಅಭಿವೃದ್ಧಿ ಮತ್ತು ಎಕ್ಸ್‌ಪ್ರೆಸ್ ಫೀಡರ್ ಸಹಾಯಧನ | 13 | ಭಾರತ ಸರ್ಕಾರದ ವಿದ್ಯುತ್ ಮಗ್ಗಗಳ ಆಧುನೀಕರಣ ಯೋಜನೆಯಡಿ ವಿದ್ಯುತ್ ಮಗ್ಗಗಳ ಉನ್ನತೀಕರಣಕ್ಕಾಗಿ ಸಹಾಯಧನ |
| 7 | ವಸತಿ ಮತ್ತು ಕಾರ್ಯಾಗಾರ | | |

ಸಂಖ್ಯೆ: ವಾಕೈ 63 ಜಕೈಇ 2018

(ಹೆಚ್.ಡಿ. ಕುಮಾರಸ್ವಾಮಿ)
ಮುಖ್ಯಮಂತ್ರಿ.